## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 1007/2018

ಚಾಸಾಃ( 18 ) ಪ್ರಾಸಾ ( 12 )

ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

ದಿನಾಂಕಃ 23-10-2024.

| | |
|---|---|
| ಸಾಕ್ಷಿದಾರರ ಹೆಸರು | ಮೈಲಾರಪ್ಪ |
| ತಂದೆ ಹೆಸರು | ನಿಂಗಪ್ಪ |
| ವಯಸ್ಸು | 27 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಸಂಗಾಪೂರ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

2018 ನೇ ಸಾಲಿನ ಪ್ರೆಬವರಿ ತಿಂಗಳಲ್ಲಿ ಗುನ್ನಾಳ ಗ್ರಾಮದಲ್ಲಿ ಹೊಸದಾಗಿ ವಿವಾಹವಾದ ವದು ವರರನ್ನು ಒಣಬಳ್ಳಾರಿಯಿಂದ ಸಂಗಾಪೂರಕ್ಕೆ ನಾನು ಆಟೋ ರಿಕ್ಷಾದಲ್ಲಿ ಕರೆದುಕೊಂಡು ಬರುತ್ತಿದ್ದಾಗ ಸುಮಾರು ಸಂಜೆ 7.30 ರ ಸಮಯದಲ್ಲಿ ಹಟ್ಟಿ ಕ್ರಾಸ್ ಹತ್ತಿರ ಹಿಂಭಾಗದಿಂದ ಆರೋಪಿಯ ತನ್ನ ಬುಲೆರಾ ವಾಹನವನ್ನು ಅತೀವೇಗಾವಾಗಿ ಬಂದು ನನ್ನ ಅಟೋ ರಿಕ್ಷಾಕ್ಕೆ ಟಕ್ಕರ್ ಕೊಟ್ಟು ಅಪಘಾತ ಪಡಿಸಿರುತ್ತಾನೆ. ನಂತರ ವಾಹನವನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿರುತ್ತಾನೆ. ಸದರಿ ಅಪಘಾತದಿಂದ ನನ್ನ ಅಟೋ ಎಡಭಾಗದಲ್ಲಿ ಪಲ್ಟಿಯಾಗಿರುತ್ತದೆ. ಸದರಿ ಅಪಘಾತದಿಂದ ಆಟೋದಲ್ಲಿದ್ದ ಪಾಲಿಕಿಯಮ್ಮ ಎಂಬುವರು ಮರಣ ಹೊಂದಿರುತ್ತಾರೆ. ಉಳಿದವರೆಲ್ಲರಿಗೂ ತೀವ್ರ ಹಾಗೂ ಸಾದಾ ಸ್ವರೂಪದ ಗಾಯಗಳು ಆಗಿದ್ದವು. ನಂತರ ನಾನು ಚಿಕಿತ್ಸೆ ಪಡೆಯಲು ಇರಕಲ್ಲುಗಡ ಅಸ್ಪತ್ರೆಗೆ ಹೋಗಿರುತ್ತೇನೆ. ಸುಮಾರು 4 ರಿಂದ 5 ದಿನಗಳ ನಂತರ ನನಗೆ ಚಾಸಾ 1 ರವರು ಅಪಘಾತದ ಬಗ್ಗೆ ಫಿರ್ಯಾದಿಯನ್ನು ನೀಡಿರುವುದಾಗಿ ತಿಳಿದಿರುತ್ತದೆ. ನಾನು ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆಟೋದಲ್ಲಿ ಇದ್ದ ಗಾಯಾಳುಗಳನ್ನು ಕೊಪ್ಪಳದ ಜಿಲ್ಲಾ ಅಸ್ಪತ್ರೆಗೆ ಕರೆ ತಂದಿರುತ್ತಾರೆ.

2. ಸದರಿ ಅಪಘಾತವು ಬುಲೇರಾ ವಾಹನದ ಚಾಲಕನಿಂದ ಅಗಿದ್ದು, ಅತನ ಹೆಸರು ಈಗ ನೆನಪಿಲ್ಲ. ಸದರಿ ಬುಲೇರಾ ವಾಹನದ ನೊಂದಣಿ ಸನಂ. ಕೆಎ 37 ಎ 8222 ಆಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು ಸದರಿ ಅರೋಪಿಯೇ ಈ ಮೇಲೆ ಹೇಳಿದ ಬುಲೇರಾ ವಾಹನವನ್ನುಚಾಲನೆ ಮಾಡುತ್ತಿದ್ದನು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು, ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಸಸಅ ರವರಿಂದಃ</u>**

ದಿಃ 16-02-2018 ರಂದು ಅಪಘಾತವಾಗಿರುತ್ತದೆ ಎಂದರೆ ಸರಿ. ಶೃತಿ ಎಂಬುವಳು ವಿವಾಹವಾಗಿದ್ದು ಅವರನ್ನು ಗಂಡನ ಮನೆಗೆ ಕರೆದುಕೊಂಡು ಬರುತ್ತಿದ್ದೇವು ಎಂದರೆ ಸರಿ. ನಮ್ಮ ಆಟೋರಿಕ್ಷಾದಲ್ಲಿ ಚಾಸಾ 1, 8 ರಿಂದ 16 ರವರು ಇದ್ದರು ಎಂದರೆ ಸರಿ. ಸದರಿ ಅಪಘಾತದಿಂದ ಕೇಲವರಿಗೆ ರಕ್ತಗಾಯಗಳು ಮತ್ತು ಕೇಲವರಿಗೆ ಮೂಳೆ ಮುರಿದಿದ್ದವು ಎಂದರೆ ಸರಿ. ಹಿಂಭಾಗದಿಂದ ಬುಲೇರಾ ವಾಹನವು ಓವರ್ ಟೇಕ್ ಮಾಡಲು ಅಡ್ಡದಿಡ್ಡಿಯಾಗಿ ಬಂದು ನಮ್ಮ ವಾಹನದ ಹಿಂಭಾಗಕ್ಕೆ ಟಕ್ಕರ್ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಅಪಘಾತದಿಂದ ನಮ್ಮ ಆಟೋ ರಿಕ್ಷಾದ ಹಿಂಭಾಗದ ಎಡಭಾಗದ ಪಟ್ಟಿಗೆ ತಾಗಿ ಅಪಘಾತವಾಗಿರುತ್ತದೆ. ಆರೋಪಿಯು ಸದರಿ ವಾಹನವನ್ನು ಗುನ್ನೆಜಾಗದಲ್ಲಿ ಬಿಟ್ಟು ಓಡಿ ಹೋಗಿರುತ್ತಾನೆ ಎಂದರೆ ಸರಿ. ಅಪಘಾತದ ಮರುದಿನ ನಾನು ಅಪಘಾತದ ಕುರಿತು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ನಂತರ ದಿನಾಂಕಃ 20-02-2018 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿಯ ಹೆಸರು ದೂದನಾನ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>**

ನಾನು ಚಾಲನೆ ಮಾಡುತ್ತಿದ್ದ ವಾಹನವು ಗೂಡ್ಸ್ ಆಟೋವಾಗಿರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನಗೆ ಚಾಲನ ಪರವಾನಿಗೆ ಇರಲಿಲ್ಲ. ಅಪಘಾತದ 6 ರಿಂದ 7 ತಿಂಗಳ ಪೂರ್ವದಲ್ಲಿ ವಾಹನವನ್ನು ಖರೀದಿಸಿದ್ದೇನು. ನನ್ನ ಅಕ್ಕಪಕ್ಕ ಆಟೋದಲ್ಲಿ ಚಾಲನೆ ಮಾಡುವಾಗ ಇಬ್ಬರು ಕುಳಿತುಕೊಂಡಿದ್ದರು. ಸದರಿ ಸ್ಥಳದಲ್ಲಿ ಚಾಲಕ ಮಾತ್ರ ಕುಳಿತುಕೊಳ್ಳಲು ಇರುತ್ತದೆ ಎಂದರೆ ಸರಿ. ನನಗೆ ಹಿಂಭಾಗದಿಂದ ಬರುವ ವಾಹನಗಳು ಕಾಣಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು ಕನ್ನಡಿಯಲ್ಲಿ ಕಾಣಿಸುತ್ತಿತ್ತು ಎಂದು ನುಡಿಯುತ್ತಾರೆ. ಬಲಭಾಗದಲ್ಲಿ ಒಬ್ಬರು ಕುಳಿತ ಕಾರಣ ಕನ್ನಡಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಿಂಭಾಗದಿಂದ ಬರುತ್ತಿದ್ದ ಬುಲೇರಾ ವಾಹನವನ್ನು ನೋಡಿದಾಗ ಸುಮಾರು 10 ಅಡಿ ಅಂತರದಲ್ಲಿ ಇತ್ತು. ಅದಕ್ಕೂ ಪೂರ್ವದಲ್ಲಿ ನಾನು ಸದರಿ ವಾಹನವನ್ನು ನೋಡಿರಲಿಲ್ಲ ಎಂದರೆ ಸರಿ.

2. ಸಾಕ್ಷಿಗೆ ದೋಷರೋಪಣಾ ಪಟ್ಟಿಯಲ್ಲಿ ತನಿಖಾಧಿಕಾರಿಯವರು ಸಲ್ಲಿಸಿರುವ ಬುಲೇರಾ ವಾಹನವನ್ನು ತೋರಿಸಿ ಸದರಿ ವಾಹನಕ್ಕೆ ಮುಂಭಾಗ ಯಾವುದೇ ಪಟ್ಟಿ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆತನನ್ನು ಪೋಲಿಸ್ ಠಾಣೆಯಲ್ಲಿ ಮೊದಲು ಬಾರಿ ನೋಡಿದ್ದೇನು ದಿನಾಂಕ ನೆನಪಿಲ್ಲ. ನನ್ನ ಹೇಳಿಕೆಯನ್ನು ಪೋಲಿಸರು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಬರೆದಿರುತ್ತಾರೆ. ಅದರ ನಂತರ ನನ್ನ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಮಾಹಿತಿ

ಇಲ್ಲ ಎಂದರೆ ಸರಿ. ಚಾಸಾ 1 ರವರು ಫಿರ್ಯಾದಿಯನ್ನು ನೀಡಿರುವ ಬಗ್ಗೆ ಪೋಲಿಸರು ತಿಳಿಸಿದ್ದರು ಅವರ ಹೆಸರು ನನಗೆ ನೆನಪಿಲ್ಲ. ಪೋಲಿಸರು ಠಾಣೆಗೆ ಬರಲು ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ ಆದರೆ ದೂರವಾಣಿ ಮೂಲಕ ತಿಳಿಸಿರುತ್ತಾರೆ.

3. ಹಟ್ಟಿ ಕ್ರಾಸ್ ನಿಂದ ಗುನ್ನಜಾಗವು ಅರ್ಧ ಕಿ.ಮೀ ಅಂತರದಲ್ಲಿ ಇದ್ದವು. ಸದರಿ ರಸ್ತೆಯ ಏರಿಳಿತದಿಂದ ಕೂಡಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ರಸ್ತೆಯಲ್ಲಿ ಬೆಳಕಿನ ವ್ಯವಸ್ಥೆ ಇರಲಿಲ್ಲ ಎಂದರೆ ಸರಿ. ಏರಿನ ರಸ್ತೆಯಲ್ಲಿ ಹೋಗುತ್ತಿದ್ದಾಗ ಎದುರುಗಡೆ ಬರುವ ವಾಹನಗಳು ಕಾಣಿಸುವುದಿಲ್ಲ ಎಂದರೆ ಸರಿ. ಗುನ್ನಜಾಗದ ರಸ್ತೆಯು ಕಚ್ಚಾ ರಸ್ತೆಯಾಗಿರುತ್ತದೆ ಎಂದರೆ ಸರಿ. ಅಕಾರಣ ವಾಹನಗಳು ಜೋರಾಗಿ ಹೋಗಲು ಅಗುವುದಿಲ್ಲ ಎಂದರೆ ಸರಿ. ನಮ್ಮ ವಾಹನದಲ್ಲಿ ಸುಮಾರು 15 ಜನರು ಇದ್ದರು. ನಮ್ಮ ವಾಹನದಲ್ಲಿ ಪ್ರಯಾಣಿಕರಿಗೆ ಕುಳಿತುಕೊಳ್ಳಲು ಯಾವುದೇ ಸೀಟಿನ ವ್ಯವಸ್ಥೆ ಇರುವುದಿಲ್ಲ ಎಂದರೆ ಸರಿ. ಹಿಂಭಾಗ ಕುಳಿತ ಕಾರಣ ಮಧ್ಯ ಭಾಗದ ಕನ್ನಡಿಯಲ್ಲಿ ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಅಪಘಾತದ ನಂತರ ನನ್ನ ಅಟೋದ ಎರಡು ಕನ್ನಡಿಗಳು ಒಡೆದು ಹೋಗಿದ್ದವು. ವಾಹನ ಬಿಡುಗಡೆಯ ಪಂಚನಾಮೆಯ ಪೋಟೋದಲ್ಲಿ ಅಟೋದ ಕನ್ನಡಿ ಇಲ್ಲ ಎಂದರೆ ಸಾಕ್ಷಿಯು ಅಪಘಾತದಲ್ಲಿ ಒಡೆದುಹೋಗಿರುವುದಾಗಿ ನುಡಿಯುತ್ತಾರೆ. ಸದರಿ ಪೋಟೊದಲ್ಲಿ ಅಟೋಕ್ಕೆ ಯಾವುದೇ ಜಕಾಂ ಅಗಿರುವುದಿಲ್ಲ ಎಂದರೆ ಸರಿಯಲ್ಲ.

4. ಅಕ್ಕಪಕ್ಕ ಜನರು ಕುಳಿತುಕೊಂಡರೆ ಸರಿಯಾಗಿ ಚಾಲನೆ ಮಾಡಲು ಅಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಟೋ ನಿಯಂತ್ರಣ ತಪ್ಪಿ ಬಿದಿದ್ದು, ಹಿಂಭಾಗದಿಂದ ಬಂದ ಆರೋಪಿಯು ನಮ್ಮನ್ನು ಕಾಪಾಡಲು ಬಂದಾಗ ಅತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿ. ನಾನು ಅಸ್ಪತ್ರೆಯಿಂದ ಅದೇ ದಿನ ಚಿಕಿತ್ಸೆಯನ್ನು ಪಡೆದು ಬಿಡುಗಡೆಯಾಗಿರುತ್ತೇನೆ. ನನಗೆ ಪೋಲಿಸರು ಈ ಮೇಲೆ ಹೇಳಿದಂತೆ ಸಾಕ್ಷಿ ನುಡಿಯಲು ಹೇಳಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.